# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1451 |
| 2 | ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | : | 20/03/2025 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಎಸ್.ಆರ್.ಪಿ ಘಟಕಗಳಲ್ಲಿ ಖಾಲಿ ಇರುವ ಸ್ಪೇ.ಆರ್.ಪಿ.ಐ ಹುದ್ದೆಗೆ ಪದೋನ್ನತಿ ನೀಡಲು ಎರಡು ವರ್ಷಗಳ ಹಿಂದೆಯೇ ಸೇವಾ ಪುಸ್ತಕವನ್ನು ಕರೆದಿದ್ದರೂ ಇನ್ನೂ ಪದೋನ್ನತಿಯನ್ನು ನೀಡದೇ ಮೀಸಲು ಪಡೆಯ ಸಿಬ್ಬಂದಿಗಳು ಬೇರೆ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸಲು ಹೆಚ್ಚು ಉತ್ಸುಕರಾಗಿರುವುದು ನಿಜವೇ: ಎಸ್.ಡಿ.ಆರ್.ಎಫ್ ಘಟಕದಲ್ಲಿ ಕೆ.ಎಸ್.ಆರ್.ಪಿ ಗೆ 09 ಸ್ಪೇ.ಆರ್‌ಪಿ.ಐ ಹುದ್ದೆಗಳು ಖಾಲಿ ಇದ್ದರೂ ವರ್ಗಾವಣೆ/ ಪದೋನ್ನತಿಯನ್ನು ನೀಡುವಲ್ಲಿ ಸರ್ಕಾರ ಉದಾಸೀನತೆ ತೋರುತ್ತಿದ್ದು ಹಾಗೂ 02 ಹೊಸ ಐ.ಆರ್.ಬಿ ಪಡೆಗಳನ್ನು ಸ್ಥಾಪಿಸುವ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಮತ್ತು ಭಾರತ ಮೀಸಲು ಪಡೆ ಘಟಕಕ್ಕೆ ನೇಮಕಗೊಂಡ ಸ್ಪೆ.ಆರ್‌ಎಸ್‌ಐ ಹುದ್ದೆಗಳ ಜ್ಯೇಷ್ಠತೆಗೆ ಸಂಬಂಧಿಸಿದಂತೆ ಪ್ರಸ್ತುತ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 3062/2024 ಮತ್ತು 2630/2024 ಪ್ರಕರಣಗಳನ್ನು ದಾಖಲಿಸಿದ್ದು, ಸದರಿ ಪ್ರಕರಣ ಸ್ಪೆ.ಆರ್‌ಎಸ್‌ಐ ಜ್ಯೇಷ್ಠತಾ ಪಟ್ಟಿಗೆ ತಡೆಯಾಜ್ಞೆಯೊಂದಿಗೆ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ನಿರ್ದೇಶನ ನೀಡಿರುತ್ತದೆ. ಆದ್ದರಿಂದ, ಮುಂಬಡ್ತಿ ನೀಡುವ ಪ್ರಕ್ರಿಯೆ ಸ್ಥಗಿತಗೊಂಡಿರುತ್ತದೆ.<br><br>02 ಹೊಸ ಐ.ಆರ್.ಬಿ. ಪಡೆಗಳನ್ನು ಆವತಿ ಗ್ರಾಮ, ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಕೆ.ಜಿ.ಎಫ್. ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿ ಸ್ಥಾಪಿಸಲು ಸ್ಥಳ ಗುರುತಿಸಲಾಗಿದ್ದು, ಸೃಜನೆಗೆ ಸಂಬಂಧಿಸಿದ ಕ್ರಮ ಚಾಲ್ತಿಯಲ್ಲಿರುತ್ತದೆ. |
| ಆ) | ಕೆ.ಎಸ್.ಆರ್.ಪಿ/ಐ.ಆರ್.ಬಿ ಘಟಕಗಳಲ್ಲಿ 03 ವರ್ಷಕ್ಕಿಂತಲೂ ಅಧಿಕವಾಗಿ ಆರ್ .ಪಿ.ಐ MTO. SM ಹಾಗೂ ಶಿಬಿರ ನಾಯಕರು ಒಂದೇ ಕಡೆ ಕರ್ತವ್ಯ ನಿರ್ವಹಿಸುತ್ತಿರುವಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡದೆ ಹಾಗೂ ಮಹಿಳಾ ಅಧಿಕಾರಿ ಸಿಬ್ಬಂದಿಗಳಿಗೆ ಪ್ರಸ್ತುತವಾಗಿ ಪ್ರತ್ಯೇಕವಾಗಿ ಪದೋನ್ನತಿಯನ್ನು ನೀಡುತ್ತಿರುವಂತೆ ಪುರುಷ ಅಧಿಕಾರಿ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ನಿಲುವೇನಾದರೂ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಮಹಿಳಾ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿಗಳನ್ನು ಕೆ.ಎಸ್.ಆರ್.ಪಿ ಯ ಎಲ್ಲಾ ಘಟಕಗಳಿಗೂ ಹಂಚಿಕೆ ಮಾಡಲಾಗುತ್ತದೆಯೇ; | ಒಂದೇ ಘಟಕದಲ್ಲಿ ದೀರ್ಘಕಾಲದಿಂದ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಸರದಿ ಆಧಾರದ ಮೇಲೆ ಕರ್ತವ್ಯ ಬದಲಾಯಿಸುವ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಮಹಿಳಾ ಅಧಿಕಾರಿ / ಸಿಬ್ಬಂದಿಗಳಿಗೆ ಕೆ.ಎಸ್.ಆರ್.ಪಿ. (ವೃಂದ ಮತ್ತು ನೇಮಕಾತಿ) ನಿಯಮಗಳಡಿಯಲ್ಲಿ ಮತ್ತು ಮಹಿಳಾ ಕಂಪನಿ ಸೃಜನೆಯ ಮಂಜೂರಾತಿ ಬಲದ ಆಧಾರದ ಮೇಲೆ ಪ್ರತ್ಯೇಕ ಪದೋನ್ನತಿ ನೀಡಲಾಗುತ್ತಿದೆ. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಪಡೆಗಳಲ್ಲಿ ಮಹಿಳಾ ಕಂಪನಿಯನ್ನು ಸೃಜಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

| | | |
|---|---|---|
| ಇ) | ಐ.ಆರ್.ಬಿ ಘಟಕದಲ್ಲಿ ನೇಮಕಾತಿ ಹೊಂದಿರುವ ಅಧಿಕಾರಿ ಸಿಬ್ಬಂದಿಗಳನ್ನು ಯಾವ C&R ನಿಯಮದಡಿಯಲ್ಲಿ ನೇಮಕಾತಿಯನ್ನು ಮಾಡಿಕೊಳ್ಳಲಾಗಿದೆ ಹಾಗೂ ಪೇಸ್ 02 ತರಬೇತಿಯು ಅವರಿಗೆ ಕಡ್ಡಾಯವಾಗಿದ್ದರೂ ಅಧಿಕಾರಿಗಳಿಗೆ ಈ ತರಬೇತಿಯನ್ನು ನೀಡಿಲ್ಲದಿರುವುದೇಕೆ; | ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ವೃಂದ ಮತ್ತು ನೇಮಕಾತಿ) ನಿಯಮಗಳಡಿಯಲ್ಲಿ ನೇಮಕಾತಿಯನ್ನು ಮಾಡಲಾಗುತ್ತಿದೆ. ಕೇಂದ್ರ ಗೃಹ ಮಂತ್ರಾಲಯದ ಮಾರ್ಗಸೂಚಿಗಳನ್ವಯ ಫೇಸ್-02 (ದಿ: 03.03.2025 ರಿಂದ 29.03.2025 ರವರೆಗೆ 04 ವಾರಗಳ) ತರಬೇತಿಗೆ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. |
| ಈ) | ಕೆ.ಎಸ್.ಆರ್.ಪಿ ಮತ್ತು ಐ.ಆರ್.ಬಿ ಘಟಕಗಳಲ್ಲಿ ಸ್ಪೆ.ಆರ್.ಎಸ್.ಐ ಆಗಿ 06-07 ವರ್ಷಗಳಿಂದ ಒಂದೇ ಘಟಕದಲ್ಲಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಟ್ಟಿದ್ದು ಐ.ಆರ್.ಬಿ ಘಟಕಗಳಿಗೆ ಘಟಕಾಧಿಕಾರಿಗಳನ್ನಾಗಿ ಎಸ್.ಪಿ ದರ್ಜೆಯ ಐ.ಪಿ.ಎಸ್ ಕೇಡರ್ ಅಧಿಕಾರಿಗಳನ್ನು ನೇಮಿಸಬೇಕು ಎಂಬ ಎಂ.ಹೆಚ್.ಎ ಆದೇಶ ಕಡ್ಡಾಯವಾಗಿ ಪಾಲನೆಯಾಗದಿರುವುದು ಯಾಕೆ? | ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಅಧೀನ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಪೆ.ಆರ್ ಎಸ್ಐ ಮತ್ತು ಸ್ಪೆ.ಆರ್‌ಪಿಐ ರವರುಗಳಿಗೆ ಆಡಳಿತಾತ್ಮಕ ಕಾರಣ ಹಾಗೂ ಸ್ವಂತ ಕೋರಿಕೆ ಮೇರೆಗೆ ವರ್ಗಾವಣೆ ಮಾಡಲಾಗಿರುತ್ತದೆ.<br><br>ಐ.ಆರ್.ಬಿ ಘಟಕಗಳಿಗೆ ಘಟಕಾಧಿಕಾರಿಗಳನ್ನಾಗಿ ಎಸ್.ಪಿ ದರ್ಜೆಯ ಐ.ಪಿ.ಎಸ್ ಕೇಡರ್ ಅಧಿಕಾರಿಗಳನ್ನು ನೇಮಿಸಬೇಕೆಂದು ಎಂ.ಹೆಚ್.ಎ ಆದೇಶದಲ್ಲಿ ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ. |

ಸಂಖ್ಯೆ: ಒಇ 44 ಪಿಇಎಂ 2025

**(ಡಾ: ಜಿ ಪರಮೇಶ್ವರ)**
ಗೃಹ ಸಚಿವರು